ರಾಣೆಗೆ ಬೇಕಾದ ಸಂಪರ್ಕ ರಸ್ತೆ ಕಲ್ಪಿಸಲು ದಿನಾಂಕ 12 4 2006ರಂದು ರೂ 4 00 ಲಕ್ಷ ಹಾಗೂ ದಿನಾಂಕ 9 11 2006 ರಂದು ರೂ 1 15 ಲಕ್ಷ ಒಟ್ಟು ರೂ 5 15 ಲಕ್ಷಗಳನ್ನು ಲೋಕೋಪಯೋಗಿ ಇಲಾಖೆಗೆ ಪಾವತಿಸಲಾಗಿದೆ ಈ ಕಾಮಗಾರಿಯು ಪೂರ್ಣಗೊಂಡ ಕೂಡಲೇ ರಾಣೆಯನ್ನು ವಶಕ್ಕೆ ಪಡೆದು ಪ್ರಾರಂಭಿಸಲು ಕ್ರಮಕೈಗೊಳ್ಳಲಾಗುವುದು

411 (504) ಶ್ರೀ ಪ್ರಭಾಕರ ಬಂಗೇರ ಕೆ (ಬೆಳ್ತಂಗಡಿ) ಮಾನ್ಯ ಮಹಿಳಾ ಮತ್ತ ಮಕ್ಕಳ ಕಲ್ಯಾಣ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2006–07 ಮತ್ತು 2008ನೇ ಸಾಲಿಗೆ ಅನ್ವಯವಾಗುವ ಭಾಗ್ಯಲಕ್ಷ್ಮಿ ಯೋಜನೆ ಯನ್ವಯ ಸೌಲಭ್ಯವನ್ನು ಇಲ್ಲಿಯತನಕ ಎಷ್ಟು ಜನ ಫಲಾನುಭವಿಗಳಿಗೆ ನೀಡಲಾಗಿದೆ? (ಜಿಲ್ಲಾವಾರು ವಿವರ ನೀಡುವುದು),

ಶ್ರೀ ಹೆಚ್ ಕೆ ಕುಮಾರಸ್ವಾಮಿ (ಮಹಿಳಾ ಮತ್ತ ಮಕ್ಕಳ ಕಲ್ಯಾಣ ಸಚಿವರು)

ಅ) ದಿನಾಂಕ 17 10 2006ರ ಆದೇಶದಲ್ಲಿ ಸೂಚಿಸಿರುವ ಮಾರ್ಗಸೂಚಿಗಳನ್ವಯ ರಾಜ್ಯದಲ್ಲಿರುವ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಲ್ಲಿ ಫಲಾನುಭವಿಗಳನ್ನು ಗುರುತಿಸಲಾಗುತ್ತದೆ 31 3 2006ರ ನಂತರ ಹುಟ್ಟಿದ ಅರ್ಹ ಹೆಣ್ಣುಮಗುವನ್ನು ಹುಟ್ಟಿದ ಒಂದು ವರ್ಷದೊಳಗೆ ಈ ಯೋಜನೆಯಡಿಯಲ್ಲಿ ದಾಖಲಿಸಬಹುದಾಗಿದೆ ದಿನಾಂಕ 31 12 006 ರವರೆಗೆ 1,11,313 ಫಲಾನುಭವಿಗಳನ್ನು ಗುರುತಿಸಲಾಗಿದೆ ಜಿಲ್ಲಾವಾರು ಪಟ್ಟಿಯನ್ನು ಲಗತ್ತಿಸಿದೆ ಸರ್ಕಾರವು ಈ ಯೋಜನೆಗೆ 2006–07 ಮತ್ತು 2007–08ನೇ ಸಾಲಿಗೆ ಅನ್ವಯಿಸಿ ಅನುಮೋದನೆ ನೀಡಿದೆ

ಈ ಯೋಜನೆ ಸಿಗುವ ಸೌಲಭ್ಯವನ್ನು ದಿನಾಂಕ 17 10 2006ರ ಆದೇಶದಲ್ಲಿ ವಿವರಿಸಿದೆ ಇದರಲ್ಲಿ ಮಗುವಿಗೆ ವೈದ್ಯಕೀಯ ಸೌಲಭ್ಯ ವಿದ್ಯಾಭ್ಯಾಸದ ಸಮಯದಲ್ಲಿ ವಿದ್ಯಾರ್ಥಿವೇತನಗಳು ಸಹ ಒಳಗೊಂಡಿದೆ ಹುಡುಗಿಗೆ 18 ವರ್ಷ ತುಂಬಿದ ನಂತರ ಯೋಜನೆಯ ಮುಕ್ತಾಯದ ಅವಧಿಯಲ್ಲಿ ಕೆಲವೊಂದು ಷರತ್ತುಗಳನ್ನು ಪೂರೈಸಿದ್ದಲ್ಲಿ ಅಂದರೆ ಅವಳು ಒಂದನೇ ತರಗತಿಯಿಂದ ಎಂಟನೇ ತರಗತಿಯವರೆಗೆ ಪಾಸಾಗಿದ್ದಲ್ಲಿ ಮತ್ತು ಅವಿವಾಹಿತಳಾಗಿದ್ದರೆ ಮಾತ್ರ ಅಂತಿಮ ಮೊತ್ತವನ್ನು ನೀಡಲಾಗುವುದು

1/4/06 ರಿಂದ 30/12/2006ರವರೆಗೆ ಹುಟ್ಟಿದ ಹೆಣ್ಣು ಮಕ್ಕಳ ವಿವರ

ಕ್ರ.ಸಂ	ಜಿಲ್ಲೆ/ತಾಲ್ಲೂಕು	ಜನಿಸಿದ ಒಟ್ಟು ಹೆಣ್ಣು ಮಕ್ಕಳು	ಬಿಪಿಎಲ್ ಕುಟುಂಬದಲ್ಲಿ ಜನಿಸಿದ ಹೆಣ್ಣು ಮಕ್ಕಳು
1	ಬಾಗಲಕೋಟೆ	11346	2897
2	ಬೆಂಗಳೂರು (ಗ್ರಾ)	6798	3942
3	ಬೆಂಗಳೂರು (ನಗರ)	20813	2161
4	ಬೆಳಗಾಂ	27497	7140
5	ಬಳ್ಳಾರಿ	10579	5887
6	ಬೀದರ್	9274	4757
7	ಬಿಜಾಮರ	12890	6213
8	ಚಾಮರಾಜನಗರ	4452	3041
9	ಚಿಕ್ಕಮಗಳೂರು	3273	1193
10	ಚಿತ್ರದುರ್ಗ	8118	4259
11	ದಕ್ಷಿಣ ಕನ್ನಡ	6800	1645
12	ದಾವಣಗೆರೆ	9823	5792
13	ದಾರವಾಡ	6616	2974
14	ಗದಗ	7356	1939
15	ಗುಲ್ಬರ್ಗಾ	23440	14093
16	ಹಾಸನ	5613	1955
17	ಹಾವೇರಿ	7912	5571
18	ಕೊಡಗು	1875	634
19	ಕೋಲಾರ	8504	4980
20	ಕೊಪ್ಪಳ	7015	3368
21	ಮಂಡ್ಯ	7020	2258
22	ಮೈಸೂರು	9949	6168
23	ರಾಯಚೂರು	81200	2504

24	ಶಿವಮೊಗ್ಗ	5673	3481
25	ತುಮಕೂರು	10626	8119
26	ಉಡುಪಿ	4727	1848
27	ಉತ್ತರ ಕನ್ನಡ	5061	2515
	ಒಟ್ಟು	324250	111331

ವಿಷಯ ಹೆಣ್ಣು ಮಕ್ಕಳಿಗಾಗಿ "ಭಾಗ್ಯಲಕ್ಷ್ಮಿ" ಯೋಜನೆ ಅನುಷ್ಠಾನ –ಆದೇಶ

ಪ್ರಸ್ತಾವನೆ 2001ರ ಜನಗಣತಿಯ ಅನುಸಾರ ಕರ್ನಾಟಕದಲ್ಲಿ ಲಿಂಗ ಅನುಪಾತವು 1000 ಪುರುಷರಿಗೆ 964 ಹೆಂಗಸರಷ್ಟಿದೆ ಈ ಅನುಪಾತವು ರಾಷ್ಟ್ರೀಯ ಸರಾಸರಿಗಿಂತ ಉತ್ತಮವಾಗಿದ್ದರೂ ಸಹ ಪ್ರಸ್ತುತ ಪರಿಸ್ಥಿತಿಯಲ್ಲಿ ಹೆಣ್ಣುಮಗುವಿನ ಸ್ಥಾನಮಾನಕ್ಕೆ ಹೆಚ್ಚಿನ ಮೌಲ್ಯ ಕಲ್ಪಿಸುವ ಬಗ್ಗೆ ಬಲವಾದ ವಾದವಿರುತ್ತದೆ ಗಂಡು ಸಂತತಿಗೆ ತೋರಲಾಗುವ ಉತ್ತೇಜನಕ್ಕೆ ಅನೇಕ ಸಾಮಾಜಿಕ ಆರ್ಥಿಕ ಕಾರಣಗಳಿದ್ದರೂ, ಇದು ಹೆಣ್ಣು ಮಕ್ಕಳ ಆರೋಗ್ಯ ಶಿಕ್ಷಣ, ಪೋಷಣೆ ಹಾಗೂ ಸರ್ವಾಂಗೀಣ ಅಭಿವೃದ್ಧಿಗೆ ಅಡಚಣೆಯಾಗಿದೆ

ರಾಜ್ಯ ಸರ್ಕಾರಕ್ಕೆ ಹೆಣ್ಣು ಮಗುವಿನ ಜನನದ ಬಗ್ಗೆ ಇರುವ ಕಾಳಜಿ ವ್ಯಕ್ತಪಡಿಸಲು ಹಾಗೂ ಹೆಣ್ಣು ಮಗುವಿನ ವಿರುದ್ಧ ಸಮಾಜದಲ್ಲಿರುವ ಧೋರಣೆಯನ್ನು ಬದಲಿಸಲು 2006–07ನೇ ಸಾಲಿನ ದಿನಾಂಕ 20–3–2006ರ ಆಯವ್ಯಯ ಭಾಷಣದಲ್ಲಿ ಹೆಣ್ಣುಮಕ್ಕಳ ರಕ್ಷಣೆಗೆ "ಭಾಗ್ಯಲಕ್ಷ್ಮಿ" ಎಂಬ ಹೊಸ ಕಲ್ಯಾಣ ಯೋಜನೆಯನ್ನು ಜಾರಿಗೆ ತರಲು ಈ ಕೆಳಕಂಡಂತೆ ಘೋಷಣೆ ಮಾಡಲಾಗಿದೆ

1 ದಿನಾಂಕ 31 3 2006ರ ನಂತರ ಹುಟ್ಟಿದ ಹೆಣ್ಣುಮಗುವಿನ ಹೆಸರಿನಲ್ಲಿ ರೂ 10,000–00 ಗಳ ರೇವಣಿ ಹೂಡುವುದು

2 ಆ ಹೆಣ್ಣುಮಗು ಬೆಳೆದು 18 ವರ್ಷದ ಪ್ರಾಯಕ್ಕೆ ಬಂದ ನಂತರ ರೇವಣಿ ಮತ್ತು ಅದರ ಬಡ್ಡಿಯನ್ನು ಆಕೆಗೆ ನೀಡಲಾಗುವುದು

3 ಇದಕ್ಕಾಗಿ 2006–07ನೇ ಸಾಲಿನಲ್ಲಿ ರೂ 234 00 ಕೋಟಿಗಳ ಅಂದಾಜು ಆಗುವ ಸಾಧ್ಯತೆ ಇದ್ದು, ಗ್ರಾಮಾಂತರ ಹಾಗೂ ನಗರ ಪ್ರದೇಶಗಳಲ್ಲಿ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಲ್ಲಿ ಜನಿಸಿದ ಎರಡು ಹೆಣ್ಣುಮಕ್ಕಳಿಗೆ ಮಾತ್ರ ಸೀಮಿತಗೊಳಿಸುವುದು

2006–07 ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಿಸಿರುವಂತೆ ಕರ್ನಾಟಕ ರಾಜ್ಯದಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸಿ ಜಾರಿಗೆ ತರಲು ಆದೇಶ ಹೊರಡಿಸಬೇಕಾಗಿದೆ ಈ ಹಿಂದೆ ಅನುಷ್ಠಾನದಲ್ಲಿದ್ದ ಯೋಜನೆಗಳಲ್ಲಿನ ಲೋಪದೋಷಗಳನ್ನು ಎಚ್ಚರಿಕೆಯಿಂದ ಅಭ್ಯಸಿಸಿ, ಕೆಳಕಂಡ ಆದೇಶ ಹೊರಡಿಸಲಾಗಿದೆ

ಸರ್ಕಾರಿ ಆದೇಶ ಸಂಖ್ಯೆ ಮಮಇ 99 ಮಮಅ 2006, ಬೆಂಗಳೂರು, ದಿನಾಂಕ 17 10 2006

ಕರ್ನಾಟಕ ಸರ್ಕಾರವು ಹೆಣ್ಣುಮಗುವಿನ ಸ್ಥಾನವನ್ನು ಕುಟುಂಬ ಹಾಗೂ ಸಮುದಾಯದಲ್ಲಿ ಹೆಚ್ಚಿಸಲು 'ಭಾಗ್ಯಲಕ್ಷ್ಮಿ" ಎಂಬ ವಿನೂತನ ಯೋಜನೆಯನ್ನು ಅನುಷ್ಠಾನಗೊಳಿಸಲು ಅನುಮೋದನೆ ನೀಡಿದೆ ಯೋಜನೆಯ ವಿವರಗಳನ್ನು ಕೆಳಕಂಡಂತೆ ವಿವರಿಸಿದೆ

I ಯೋಜನೆಯ ಮುಖ್ಯ ಉದ್ದೇಶಗಳು

ಹೆಣ್ಣುಮಗುವನ್ನು ಆರ್ಥಿಕ ನೆರವಿನ ಮೂಲಕ ಸಬಲೀಕರಣಗೊಳಿಸುವುದು ಈ ಯೋಜನೆಯ ಮುಖ್ಯ ಉದ್ದೇಶ ಮಗು ಜನಿಸಿದ ಒಂದು ತಿಂಗಳೊಳಗೆ ಅರ್ಜಿಯನ್ನು ಪಡೆದು ಈ ನೆರವನ್ನು ಮಗುವಿನ ತಾಯಿ ಅಥವಾ ತಾಯಿ/ತಂದೆ ಇಲ್ಲದ ಪಕ್ಷದಲ್ಲಿ ಪೋಷಕರ ಹೆಸರಿನಲ್ಲಿ ಕೆಲವೊಂದು ಷರತ್ತುಗಳನ್ನು ಪೂರೈಸಿದಲ್ಲಿ, ನೀಡಲಾಗುವುದು

II ಯೋಜನೆ

1 ಭಾಗ್ಯಲಕ್ಷ್ಮಿ ಯೋಜನೆಯನ್ನು ಸರ್ಕಾರವು ಆಗಿಂದಾಗ್ಗೆ ತಿದ್ದುಪಡಿ ಮಾಡುವ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 1999 ಹಾಗೂ ನಿಯಮಗಳು 2000ರಡಿ ಆಯ್ಕೆ ಮಾಡಿದ ಹಣಕಾಸು ಸಂಸ್ಥೆಯ ಸಹಭಾಗಿತ್ವದೊಡನೆ ಅನುಷ್ಠಾನಗೊಳಿಸಲಾಗುವುದು

2 ಯೋಜನೆಯು 2—6–07 ಮತ್ತು 2007–08ನೇ ಸಾಲಿನಲ್ಲಿ ಚಾಲ್ತಿಯಲ್ಲಿರುತ್ತದೆ ಮತ್ತು ಒಂದು ವರ್ಷದ ನಂತರ ಯೋಜನೆಯನ್ನು ಪರಾಮರ್ಶೆ ಮಾಡಿ ಯಾವುದಾದರೂ ಬದಲಾವಣೆಗಳು ಅಗತ್ಯವಿರುತ್ತವೆಯೇ ಎಂಬುದನ್ನು ಪರಿಶೀಲಿಸಿ ಯೋಜನೆಯನ್ನು ಮುಂದುವರಿಸುವುದನ್ನು ನಿರ್ಧರಿಸಲಾಗುವುದು

3 ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಲ್ಲಿ ದಿನಾಂಕ 31 3 2006ರ ನಂತರ ಜನಿಸಿದ ಹೆಣ್ಣು ಮಕ್ಕಳನ್ನು ಭಾಗ್ಯಲಕ್ಷ್ಮಿ ಯೋಜನೆಯಡಿ ಫಲಾನುಭವಿಗಳನ್ನಾಗಿ ದಾಖಲಿಸಿಕೊಳ್ಳಲಾಗುವುದು ಹೆಸರು ನೋಂದಾಯಿಸಲು ಮಗುವಿನ ಜನನ ಪ್ರಮಾಣ ಪತ್ರ ಒದಗಿಸಿದಲ್ಲಿ ಮಗುವು ಜನಿಸಿದ ದಿನಾಂಕದಿಂದ ಒಂದು ವರ್ಷದವರೆಗೆ ಕಾಲಾವಕಾಶ ನೀಡಲಾಗುವುದು

4 ಯೋಜನೆಯ ಸೌಲಭ್ಯಗಳನ್ನು ಬಡತನ ರೇಖೆಗಿಂತ ಕೆಳಗೆ ಇರುವ ಕುಟುಂಬದ ಇಬ್ಬರು ಹೆಣ್ಣುಮಕ್ಕಳಿಗೆ ಸೀಮಿತಗೊಳಿಸಲಾಗಿದೆ ಫಲಾನುಭವಿ ಹೆಣ್ಣುಮಗುವಿನ ತಂದೆ ಅಥವಾ ತಾಯಿ ಶಾಶ್ವತ ಕುಟುಂಬ ಯೋಜನೆಯನ್ನು ಅಳವಡಿಸಿಕೊಂಡಿರತಕ್ಕದ್ದು ಮತ್ತು ಕುಟುಂಬದಲ್ಲಿನ ಮಕ್ಕಳ ಸಂಖ್ಯೆ 3ಕ್ಕಿಂತ ಹೆಚ್ಚಿಗೆ ಇರಬಾರದು

5 ಹೆಣ್ಣುಮಗು ಫಲಾನುಭವಿ ಎಂದು ನೊಂದಣಿಯಾದ ನಂತರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಪೂರ್ಣ ದೃಢೀಕರಣದ ನಂತರ ಪ್ರತಿ ಫಲಾನುಭವಿಗೆ ರೂ 10,000/– ಗಳನ್ನು ಆಯ್ಕೆಯಾದ ಪಾಲುದಾರ ಹಣಕಾಸು ಸಂಸ್ಥೆಯಲ್ಲಿ ನಿಶ್ಚಿತ ರೇವಣಿಯನ್ನು ಇಡುವುದು

6 ಪಾಲುದಾರ ಹಣಕಾಸು ಸಂಸ್ಥೆಯು ಹೆಣ್ಣುಮಗುವಿನ ಹೆಸರಿನಲ್ಲಿ ಇಟ್ಟ ರೂ 10,000/– ಗಳ ರೇವಣಿಯ ಮೇಲಿನ ಆದಾಯವನ್ನು ಗರಿಷ್ಠಗೊಳಿಸಿ, ರೇವಣಿ ಹಣವನ್ನು ಬಡ್ಡಿ ಸಮೇತವಾಗಿ ಫಲಾನುಭವಿಗೆ 18 ವರ್ಷಗಳು ಪೂರ್ಣಗೊಂಡನಂತರ ದೊರಕಿಸಿಕೊಡುತ್ತೇನೆ

7 ಯೋಜನೆಯನ್ನು ಕಂಡಿಕೆ VI ರಲ್ಲಿ ತಿಳಿಸಿರುವಂತೆ ವಿವಿಧ ಸರ್ಕಾರಿ ಇಲಾಖೆಗಳ ಸಹಾಯದೊಂದಿಗೆ ಅನುಷ್ಠಾನಗೊಳಿಸಲಾಗುವುದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ನೋಡಲ್ ಇಲಾಖೆಯಾಗಿದ್ದು, ಯೋಜನೆಯ ಅನುಷ್ಠಾನಕ್ಕಾಗಿ ಸಂಪೂರ್ಣ ಗಣಕೀಕೃತ ಆಡಳಿತ ವ್ಯವಸ್ಥೆಯನ್ನು ಅಳವಡಿಸುವ ಆಯ್ಕೆಯಾದ ಪಾಲುದಾರ ಹಣಕಾಸು ಸಂಸ್ಥೆಯ ಸಹಯೋಗದಿಂದ ಅನುಷ್ಠಾನಗೊಳಿಸುವುದು

8 ಯೋಜನೆಯ ಅನುಷ್ಠಾನದ ಆಡಳಿತ ವೆಚ್ಚವನ್ನು ಪ್ರತ್ಯೇಕವಾಗಿ ಭರಿಸಲಾಗುವುದು

9 ಫಲಾನುಭವಿಗೆ ವಿದ್ಯಾರ್ಥಿ ವೇತನ, ವಿಮೆ ಸೌಲಭ್ಯ ಮುಂತಾದ ಮಧ್ಯಂತರ ಸಂದಾಯಗಳನ್ನು ಕೆಳಗಿನ ಕಂಡಿಕೆ III ರಲ್ಲಿ ತಿಳಿಸಿರುವ ಅರ್ಹತೆ ಮಾನದಂಡಗಳನ್ನು ಪೂರೈಸಿದಲ್ಲಿ ನೀಡಲಾಗುವುದು

ವ್ಯಾಸಂಗ ವೇತನದ ವಿವರಗಳು ಈ ಕೆಳಗಿನಂತಿರುತ್ತವೆ

ತರಗತಿ	ವಾರ್ಷಿಕ ವಿದ್ಯಾರ್ಥಿವೇತನದ ಮೊತ್ತ ರೂ ಗಳಲ್ಲಿ
1ನೇ ರಿಂದ 3ನೇ	ಪ್ರತಿ ತರಗತಿಗೆ ವಾರ್ಷಿಕ 300/–
4ನೇ	ವಾರ್ಷಿಕ 500/–
5ನೇ	ವಾರ್ಷಿಕ 600/–
6 ರಿಂದ 7ನೇ	ವಾರ್ಷಿಕ 700/–
8ನೇ	ವಾರ್ಷಿಕ 800/–
9ರಿಂದ 10ನೇ	ವಾರ್ಷಿಕ 1000/–

10 ಫಲಾನುಭವಿಯ ತಂದೆ ತಾಯಿ ಹೆಣ್ಣುಮಗು ತನ್ನ ವಿದ್ಯಾಭ್ಯಾಸವನ್ನು ಮುಂದುವರೆಸುವುದನ್ನು ಖಚಿತಪಡಿಸಬೇಕು ಮತ್ತು ವಿದ್ಯಾರ್ಥಿ ವೇತನವನ್ನು ಪಡೆಯುವುದಕ್ಕೆ ಅರ್ಹತೆ ಹೊಂದಲು ಪ್ರತಿ ತರಗತಿಯಲ್ಲಿಯೂ ವರ್ಷದಿಂದ ವರ್ಷಕ್ಕೆ ತೇರ್ಗಡೆ ಹೊಂದಬೇಕು ಅಲ್ಲದೇ 18ನೇ ವರ್ಷದ ವಯೋಮಾನಕ್ಕೆ ಮುಂಚಿತವಾಗಿ ವಿವಾಹವಾಗಬಾರದು ಒಂದು ವೇಳೆ ಈ ಅವಧಿಯ ಒಳಗೆ ವಿವಾಹವಾಗಿದ್ದು ಕಂಡುಬಂದಲ್ಲಿ ಅಂತಿಮ ಸೌಲಭ್ಯಗಳನ್ನು ಸರ್ಕಾರವು ಮುಟ್ಟುಗೋಲು ಹಾಕಿಕೊಳ್ಳುವುದು

11 ಫಲಾನುಭವಿಗೆ ನಿಗಧಿಯಾಗಿ ಯಾವುದೇ ಕಾರಣದಿಂದ ಆಕೆಗೆ ವಿತರಣೆಯಾಗದೆ ಉಳಿದ ಹಣವು ಮರಳಿ ಸರ್ಕಾರಕ್ಕೆ ಬಡ್ಡಿ ಸಮೇತ ಜಮೆಯಾಗುವುದು

III ಅರ್ಹತೆಯ ಮಾನದಂಡ

1 ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ ಗುರುತಿಸಿ, ಕಡ್ಡಾಯ ಗುರುತಿನ ಚೀಟಿ ಹೊಂದಿರುವ ಬಡತನ ರೇಖೆಗಿಂತ ಕೆಳಗಿನ ಕುಟುಂಬ

2 ಕುಟುಂಬದ ಎರಡು ಹೆಣ್ಣುಮಕ್ಕಳು ಮಾತ್ರ ಈ ಸೌಲಭ್ಯವನ್ನು ಪಡೆಯಲು ಸೀಮಿತಗೊಳಿಸಲಾಗಿದೆ ಈ ಕುಟುಂಬವು ಮಗುವಿನ ತಾಯಿ ಅಥವಾ ತಂದೆ ಯಾರಾದರೊಬ್ಬರು ಶಾಶ್ವತ ಕುಟುಂಬ ಯೋಜನೆಯ ಪದ್ಧತಿಯನ್ನು ಅಳವಡಿಸಿಕೊಂಡಿದ್ದು, ಒಟ್ಟು ಮೂರು ಮಕ್ಕಳನ್ನು ಮೀರಿರಕೂಡದು

(ಸೂಚನೆ ಬಹುಪತಿ ಪತ್ನಿಯರನ್ನು ಹೊಂದಿದ್ದರೂ ಎರಡು ಮಕ್ಕಳು ಮಾತ್ರ ಈ ಯೋಜನೆ ಸೌಲಭ್ಯಕ್ಕೆ ಅರ್ಹರಾಗುತ್ತಾರೆ ದೇವದಾಸಿಯರ ಮಕ್ಕಳು ಈ ಯೋಜನೆಗೆ ಅರ್ಹರಿರುತ್ತಾರೆ)

3 ಈ ಯೋಜನೆಯನ್ನು ಗ್ರಾಮಾಂತರ ಹಾಗೂ ನಗರ ಪ್ರದೇಶಗಳಲ್ಲೂ ಅನುಷ್ಠಾನಗೊಳಿಸಲಾಗುವುದು

4 ಅಂಗನವಾಡಿಗಳಿರುವ ಪ್ರದೇಶಗಳಲ್ಲಿ ಈ ಯೋಜನೆ ಅಡಿಯಲ್ಲಿ ದಾಖಲಾದ ಹೆಣ್ಣುಮಗುವು ಕೆಳಕಂಡ ಮಾನದಂಡಗಳನ್ನು ಪೂರೈಸಬೇಕು

ಅ) ಆರೋಗ್ಯ ಇಲಾಖೆಯಿಂದ ಮಗುವಿಗೆ ರೋಗ ನಿರೋಧಕ ಲಸಿಕೆ ಹಾಕಿಸಬೇಕು

ಆ) 0–6 ವರ್ಷದವರೆವಿಗೆ ನಿರಂತರವಾಗಿ ಅಂಗನವಾಡಿ ಕೇಂದ್ರಕ್ಕೆ ಹಾಜರಾಗಬೇಕು

ಇ) ಶಿಕ್ಷಣ ಇಲಾಖೆಯಿಂದ ಅಂಗೀಕರಿಸಲ್ಪಟ್ಟ ಶಾಲೆಗಳಲ್ಲಿ ದಾಖಲಿಸಬೇಕು ಆ ಇಲಾಖೆಯಿಂದ ಕಾಲ ಕಾಲಕ್ಕೆ ನೀಡುವ ಶೈಕ್ಷಣಿಕ ಸಹಾಯಕ್ಕೆ ಅರ್ಹಳಾಗುತ್ತಾಳೆ ನಿರಂತರವಾಗಿ ಶಾಲೆಗೆ ಹಾಜರಾಗುತ್ತಿರುವ ಬಗ್ಗೆ ಶಾಲೆಯ ಪ್ರಾಧಿಕಾರದಿಂದ ದಾಖಲಿಸಿರಬೇಕು

ಈ) ಒಂದನೇ ತರಗತಿಯಿಂದ ತೇರ್ಗಡೆ ಹೊಂದಿ ಕನಿಷ್ಠ ಎಂಟನೇ ತರಗತಿಯವರೆಗೆ ವ್ಯಾಸಂಗ ಮಾಡಿದಲ್ಲಿ ಅಂತಿಮವಾಗಿ

ಅನುತ್ತೀರ್ಣಳಾದ ವರ್ಷದಲ್ಲಿ, ವಿದ್ಯಾರ್ಥಿ ವೇತನಕ್ಕೆ ಅರ್ಹಳಾಗಿರುವುದಿಲ್ಲ

ಊ) ಬಾಲಕಾರ್ಮಿಕ ನಿಷೇಧ ಕಾಯ್ದೆ 1986ರಂತೆ ಬಾಲಕಾರ್ಮಿಕಳಾಗಿರತಕ್ಕದ್ದಲ್ಲ

ಋ) 18 ವರ್ಷ ಪೂರೈಸುವ ಮೊದಲು ವಿವಾಹವಾಗತಕ್ಕದ್ದಲ್ಲ ಈ ಅವಧಿಯೊಳಗೆ ಕಂಡುಬಂದಲ್ಲಿ ಅರ್ಹ ಮೊಬಲಗನ್ನು ಸಂದಾಯ ಮಾಡಲಾಗುವುದಿಲ್ಲ

ಌ) ಆಯ್ಕೆಯಾದ ಫಲಾನುಭವಿಯು ಮೇಲೆ ತಿಳಿಸಿದ ಅರ್ಹತೆಯ ಮಾನದಂಡಗಳಲ್ಲಿನ ಒಂದು ಆರ್ಥಿಕ ಅದಕ್ಕೂ ಹೆಚ್ಚಿನ ಷರತ್ತುಗಳನ್ನು ಪೂರೈಸದಿದ್ದಲ್ಲಿ ಸೌಲಭ್ಯ ನೀಡುವುದನ್ನು ತತ್‌ಕ್ಷಣದಿಂದ ರದ್ದುಪಡಿಸಲಾಗುವುದು

IV ಫಲಾನುಭವಿಗಳನ್ನು ಗುರುತಿಸುವಿಕೆ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಫಲಾನುಭವಿಗಳನ್ನು ಅಂಗನವಾಡಿ ಕಾರ್ಯಕರ್ತೆಯರ ಮುಖಾಂತರ ಗುರುತಿಸುತ್ತಾರೆ ಇದಕ್ಕೆ ಸಂಬಂಧಿಸಿದ ಅರ್ಜಿಯನ್ನು ತಂದೆ–ತಾಯಿ ಅಥವಾ ಪೋಷಕರಿಂದ ಪಡೆದು ಸಂಬಂಧಪಟ್ಟ ಪ್ರಾಧಿಕಾರಗಳಿಂದ ಪಡೆದ ಜನನ ಪ್ರಮಾಣ ಪತ್ರ ಹಾಗೂ ಬಡತನ ರೇಖೆಗಿಂತ ಕೆಳಗಿರುವ ಕುಟುಂಬವೇ ಎಂಬ ಬಗ್ಗೆ

ಐ) ಗುರುತಿಸಿದ ಫಲಾನುಭವಿಗೆ ರೂ 10000–00 ರೇವಣಿ ಇಡುವ ವ್ಯವಸ್ಥೆ ಮಾಡುವುದು

ಒ) 0–6 ವರ್ಷದವರೆಗೆ ಮಗುವಿನ ಬೆಳವಣಿಗೆಯನ್ನು ವರಿಶೀಲಿಸುವುದು

ಓ) ಶಿಶುಮರಣ, ತಾಯಂದಿರ ಮರಣ, ಬಾಲ್ಯ ವಿವಾಹ, ಹೆಣ್ಣುಮಗುವಿನ ಅನಕ್ಷರತೆ, ಶಾಲೆಯಿಂದ ಹೊರಗುಳಿದ ಮಕ್ಕಳು, ಬಡತನ ಮಟ್ಟದಲ್ಲಿ ಸುಧಾರಣೆ ಇವುಗಳ ಬಗ್ಗೆ ವಿವರಗಳನ್ನು ಇಡುವುದು ಮತ್ತು ಇವುಗಳ ಸುಧಾರಣೆಗಾಗಿ ಅಗತ್ಯ ಕ್ರಮ ವಹಿಸುವುದು

ವಹಿಸುವುದು

ಐ) ಅಂಗನವಾಡಿ ಕಾರ್ಯಕರ್ತೆ ಫಲಾನುಭವಿಯ ಆರೋಗ್ಯದ ಬಗ್ಗೆ, ರೋಗ ನಿರೋಧಕ ಚುಚ್ಚುಮದ್ದು ಹಾಗೂ ಪೌಷ್ಟಿಕಾಂಶದ ಬಗ್ಗೆ ನಿರ್ವಹಿಸಿರುವ ಶಾಲೆಗಳನ್ನು ಪರಿಶೀಲಿಸಿ ಕೇಂದ್ರಿಯ ಮಾಹಿತಿ ಕೇಂದ್ರ ದಲ್ಲಿ ಗಣಕೀಕರಣಗೊಳಿಸಬೇಕು

2 ಕಂದಾಯ ಇಲಾಖೆ

ಫಲಾನುಭವಿಯು ಜನನದ, ಮರಣದ ಹಾಗೂ ವಿವಾಹದ ವಿವರಗಳನ್ನು ದಾಖಲಿಸಬೇಕು

3 ಯೋಜನಾ ಇಲಾಖೆ

1 ಮಾನವ ಸಂಪನ್ಮೂಲ ಕ್ರೋಢೀಕರಣ–ಈ ಯೋಜನೆಯ ಆಗು–ಹೋಗುಗಳು ಪ್ರಗತಿಯ ಫಲಿತಾಂಶದ ಬಗ್ಗೆ ಸಲಹೆ ನೀಡುವುದು/

4 ನಗರಾಭಿವೃದ್ಧಿ ಇಲಾಖೆ

1 ರಾಜ್ಯದ ಮಹಾನಗರ ಪಾಲಿಕೆ/ನಗರ ಸಭೆ ವ್ಯಾಪ್ತಿಯಲ್ಲಿ ಬಡತನ ರೇಖೆಗಿಂತ ಕೆಳಗಿನ ಕುಟುಂಬಗಳಲ್ಲಿ ಜನಿಸುವ ಹೆಣ್ಣು ಮಕ್ಕಳನ್ನು ಗುರುತಿಸಲು ಸಹಾಯ ಮಾಡುವುದು

2 ಈ ಯೋಜನೆಯಡಿ ಫಲಾನುಭವಿಗಳನ್ನು ನೋಂದಾಯಿಸಲು ಅರ್ಜಿಗಳನ್ನು ಪಡೆದು ದಾಖಲೆ ಪರಿಶೀಲಿಸಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖಾ ಸಹಾಯಕ ನಿರ್ದೇಶಕರು/ಉಪ ನಿರ್ದೇಶಕರಿಗೆ ರವಾನಿಸುವುದು

5 ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

1 ಅಂಗನವಾಡಿ ಕೇಂದ್ರಗಳು ಇಲ್ಲದ ಸ್ಥಳಗಳಲ್ಲಿ ಗ್ರಾಮೀಣ ಪ್ರದೇಶ/ಗುಡ್ಡಗಾಡು ಪ್ರದೇಶಗಳಲ್ಲಿ ಭಾಗ್ಯಲಕ್ಷ್ಮಿ ಯೋಜನೆಗೆ ಅರ್ಹ ಫಲಾನುಭವಿಗಳು ಲಭ್ಯವಿದ್ದಲ್ಲಿ ಗುರುತಿಸಿ ನೋಂದಾಯಿಸಲು ಕ್ರಮ ವಹಿಸುವುದು

2 ಈ ಕುಟುಂಬಗಳಿಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಸೌಲಭ್ಯ ನೀಡಲು ಆದ್ಯತೆ ನೀಡುವುದು

6 ಆರೋಗ್ಯ ಇಲಾಖೆ

1 ಜನನಿ ಸುರಕ್ಷ ಯೋಜನೆಯಡಿ ಸೌಲಭ್ಯ ನೀಡುವ ಎಲ್ಲಾ ಅರ್ಹ ಫಲಾನುಭವಿಗಳನ್ನು ಭಾಗ್ಯಲಕ್ಷ್ಮೀ ಯೋಜನೆಯ ಸೌಲಭ್ಯ ಪಡೆಯಲು ಪ್ರೇರೇಪಿಸಬೇಕು

2 ಹೆಣ್ಣು ಮಗುವಿನ ಜನನದಿಂದ 18 ವರ್ಷಗಳವರೆಗೆ ಮಗುವಿನ ಆರೋಗ್ಯವನ್ನು ಚುಚ್ಚುಮದ್ದು ಹಾಗೂ ಅನಾರೋಗ್ಯ ಒಳಗೊಂಡಂತೆ ಉಸ್ತುವಾರಿ ಮಾಡುವುದು

3 ಫಲಾನುಭವಿ ಮತ್ತು ಫಲಾನುಭವಿಯ ತಂದೆ–ತಾಯಿಯವರಿಗೆ ಆರೋಗ್ಯ ವಿಮೆ ಸೌಲಭ್ಯಗಳನ್ನು ಅನುಷ್ಠಾನಗೊಳಿಸುವುದು

7 ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ

ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ನಾಶವಾಗದಂತಹ (Tamper Proof) ಗುರುತಿನ ಚೀಟಿಗಳನ್ನು ಒದಗಿಸಬೇಕು

1 ಫಲಾನುಭವಿಗಳನ್ನು ದಾಖಲಿಸುವ ಆಧಾರದ ಮೇಲೆ ಕಾಲ ಕಾಲಕ್ಕೆ ಹಣವನ್ನು ಒದಗಿಸಬೇಕು

2 ಯೋಜನೆಯನ್ನು ಸಮರ್ಪಕವಾಗಿ ಮತ್ತು ದೀರ್ಘಕಾಲದ ಪೂರ್ಣಾವಧಿಗೆ ನಡೆಸುವಂತಹ ಸಮರ್ಥ ಪಾಲುದಾರ ಹಣಕಾಸು ಸಂಸ್ಥೆಯನ್ನು ಗುರುತಿಸಲು ಸಹಾಯ ಮಾಡುವುದು

3 ಪಾಲುದಾರ ಹಣಕಾಸು ಸಂಸ್ಥೆಯ ಕಾರ್ಯವನ್ನು ನಿಯತಕಾಲಿಕವಾಗಿ ಪರಿಶೀಲನೆಗೆ ಒಳಪಡಿಸುವುದು ಹಾಗೂ ಕಾರ್ಯವನ್ನು ನಿಯತಕಾಲಿಕವಾಗಿ ಪರಿಶೀಲನೆಗೆ ಒಳಪಡಿಸುವುದು ಹಾಗೂ ಇಟ್ಟಿರುವ ಠೇವಣಿಯ ಹಣದ ಗರಿಷ್ಠತೆ ಹಾಗೂ ಸುರಕ್ಷತೆಯನ್ನು ಹೊಂದಿರುವ ಬಗ್ಗೆ

4 ಪಾಲುದಾರ ಹಣಕಾಸು ಸಂಸ್ಥೆಗೆ ಆಡಳಿತಾತ್ಮಕ ವೆಚ್ಚಗಳಿಗಾಗಿ ನೀಡಿದ ಹಣದ ಖರ್ಚು ವೆಚ್ಚದ ಬಗ್ಗೆ ಲೆಕ್ಕ ತಪಾಸಣೆ ನಡೆಸುವುದು

9 ಇ–ಆಡಳಿತ

1 ಗಣಕೀಕರಣ ವ್ಯವಸ್ಥೆಯನ್ನು ಕಾಲ ಕಾಲಕ್ಕೆ ಲೆಕ್ಕ ತಪಾಸಣೆಗೊಳಪಡಿಸಿ ಯೋಜನೆಯ ಅನುಷ್ಠಾನದಲ್ಲಿ

2 ಭಾಗ್ಯಲಕ್ಷ್ಮಿ ಯೋಜನೆಯ ಅನುಷ್ಠಾನದಲ್ಲಿ ಜವಾಬ್ದಾರಿ ವಹಿಸಿಕೊಳ್ಳುತ್ತಿರುವ ಪ್ರತಿ ಇಲಾಖೆಗೂ, ಈ ಯೋಜನೆಯಡಿ ಆ ಇಲಾಖೆ ನಿರ್ವಹಿಸಬೇಕಾಗಿರುವ ಪಾತ್ರ ಮತ್ತು ಜವಾಬ್ದಾರಿಯನ್ನು ಗಣನೆಗೆ ತೆಗೆದುಕೊಂಡು, ಅದಕ್ಕನುಗುಣವಾಗಿ ಹೂಡುವಳಿ, ವರದಿ ನಮೂನೆಗಳು ಮತ್ತು ದತ್ತಾಂಶಗಳ ವಿನ್ಯಾಸ ರೂಪಿಸಬೇಕು

3 ಹೋಬಳಿ ಕೇಂದ್ರಗಳಲ್ಲಿ ಸ್ಥಾಪಿಸಲಾಗುವ ನೆಮ್ಮದಿ ಕೇಂದ್ರಗಳ ಮುಖಾಂತರ ವಿವಿಧ ಗ್ರಾಮಗಳಲ್ಲಿನ ಫಲಾನುಭವಿ/ತಂದೆ ತಾಯಿಯರ ಮಾಹಿತಿಗಳನ್ನು ಪಡೆಯಲು ಸಹಾಯ ಮಾಡುವುದು ಮತ್ತು ಸದರಿ ಮಾಹಿತಿಗಳನ್ನು ಸಂಬಂಧಿಸಿದ ಇಲಾಖೆಗಳ ಕೇಂದ್ರೀಕೃತ ಮಾಹಿತಿ ಕೇಂದ್ರಗಳಿಗೆ ವರ್ಗಾಯಿಸಲು, ವ್ಯವಸ್ಥೆ ಮಾಡುವುದು

10 ಶಿಕ್ಷಣ ಇಲಾಖೆ

1 ವಿದ್ಯಾರ್ಥಿ ವೇತನ ಪಾವತಿಸಲು ಹೆಣ್ಣುಮಗುವು 6 ರಿಂದ 18 ವರ್ಷದವರೆಗೆ ಶಾಲೆಯಲ್ಲಿ ವ್ಯಾಸಂಗ ಮಾಡುವ ಅವಧಿಯಲ್ಲಿನ ಪ್ರಗತಿಯನ್ನು ಪರಿಶೀಲಿಸುವುದು

VII ಇತರ ಆಡಳಿತಾತ್ಮಕ ಕ್ರಮಗಳು

1 ಫಲಾನುಭವಿಯನ್ನು ಗುರುತಿಸಿ ನೋಂದಾಯಿಸಿಕೊಳ್ಳುವ ಹಾಗೂ ಪ್ರಗತಿ ಪರಿಶೀಲನೆ ಮಾಡುವ ಅಂಗನವಾಡಿ ಕಾರ್ಯಕರ್ತೆಯರಿಗೆ ಮಾಹೆಯಾನ ರೂ 25/–ಗಳ ಪ್ರೋತ್ಸಾಹ ಧನ ನೀಡಲಾಗುವುದು

2 ಯೋಜನೆಯ ಅನುಷ್ಠಾನದ ಆಡಳಿತಾತ್ಮಕ ಹೊಣೆಯು ಭಾಗಶಃ ಹಣಕಾಸು ಸಂಸ್ಥೆಯದಾಗಿದ್ದು, ಮತ್ತು ಭಾಗಶಃ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ನಿರ್ದೇಶನಾಲಯ ಹಾಗೂ ನಚಿವಾಲಯದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯದಾಗಿರುವುದರಿಂದ, ಇದಕ್ಕಾಗಿ ಪ್ರತ್ಯೇಕವಾಗಿ, ಶೇಕಡ 2ರಷ್ಟು ಅಥವಾ ರೂ ನಾಲ್ಕು ಕೋಟಿ, ಯಾವುದು ಕಡಿಮೆಯೋ ಅದನ್ನು ಆಡಳಿತಾತ್ಮಕ ವೆಚ್ಚಗಳಿಗಾಗಿ ಹಂಚಿಕೆ ಮಾಡಲಾಗುವುದು

3 ಈ ಯೋಜನೆಯನ್ನು ರಾಜ್ಯ ವಲಯದಲ್ಲಿ ಮಹಿಳಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖಾ ನಿರ್ದೇಶಕರು ಆಯ್ಕೆಯಾದ ಪಾಲುದಾರ ಹಣಕಾಸು ಸಂಸ್ಥೆಯ ಮುಖಾಂತರ ಮೇಲೆ ತಿಳಿಸಿರುವ ಇಲಾಖೆಗಳ ಸಹಕಾರ ದೊಂದಿಗೆ ಅನುಷ್ಠಾನಗೊಳಿಸುತ್ತಾರೆ

4 ಫಲಾನುಭವಿ ಹೆಣ್ಣುಮಕ್ಕಳ ಜನನದ ರಿಜಿಸ್ಟ್ರೇಷನ್ ಬಗ್ಗೆ ಕ್ರೋಢಿಕೃತ ಮಾಹಿತಿ ಸರ್ಕಾರಕ್ಕೆ ಒದಗಿಸಿದ ನಂತರ ಅನುದಾನದವನ್ನು ಹಂತಹಂತವಾಗಿ ಬಿಡುಗಡೆ ಮಾಡಲಾಗುವುದು

5 ಈ ಯೋಜನೆಯಡಿ ನಿಶ್ಚಿತ ಠೇವಣಿ ಹೂಡಲು ಅರ್ಜಿ ಮುಚ್ಚಳಿಕೆ ಪ್ರಮಾಣ, ಪತ್ರ, ಮೇಲ್ವಿಚಾರಕಿಯರ, ಧೃಢೀಕರಣ ಪತ್ರ, ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಶಿಫಾರಸ್ಸು ಪತ್ರ ಸಹಾಯಕ /ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಕಛೇರಿ ಇವರ ನಡವಳಿ (ಮಂಜೂರಾತಿ ಆದೇಶ) ಫ್ಲೋ ಚಾರ್ಟ್ ಇವುಗಳ ಮಾದರಿಯನ್ನು ಈ ಆದೇಶದೊಂದಿಗೆ ಲಗತ್ತಿಸಿರುವ ನಮೂನೆ 1 ರಿಂದ 6 ರಲ್ಲಿ ನೀಡಲಾಗಿದೆ

6 ಹಣಕಾಸು ಸಂಸ್ಥೆಯು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯೊಂದಿಗೆ ನಿಯತಕಾಲಿಕವಾಗಿ ಹೊಂದಾಣಿಕೆ ಮಾಡಿಕೊಂಡು ಸರ್ಕಾರಕ್ಕೆ ವರದಿಯನ್ನು ಸಲ್ಲಿಸುವುದು ವಿತರಣೆಯಾಗದ ಎಲ್ಲಾ ಮೊತ್ತವು ಸರ್ಕಾರಕ್ಕೆ ವ್ಯಾಪ್ತವಾಗುವುದು

7 ಈ ಯೋಜನೆಯ ವೆಚ್ಚವನ್ನು ಲೆಕ್ಕಶೀರ್ಷಿಕೆ 2235–02–102–0–25–100 (ಯೋಜನೆ) ಧನಸಹಾಯ/ಪರಿಹಾರ ಇದರಡಿ ಭರಿಸತಕ್ಕದ್ದು

ಈ ಆದೇಶವನ್ನು ಯೋಜನಾ ಇಲಾಖೆ ಮತ್ತು ಆರ್ಥಿಕ ಇಲಾಖೆಗಳು ಅನಧಿಕೃತ ಟಿಪ್ಪಣಿ ಸಂಖ್ಯೆ ಕ್ರಮವಾಗಿ ಮತ್ತು ದಿ 15 9 2006ರಲ್ಲಿ ನೀಡಿರುವ

ಸಹಮತಿ ಹಾಗೂ ದಿ 23 9 2006ರಂದು ನಡೆದ ಅಧಿಕಾರಯುಕ್ತ ಸಮಿತಿ ಅನುಮೋದನೆ ಮೇರೆಗೆ ಹೊರಡಿಸಲಾಗಿದೆ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ರಂಜಿನಿ ಶ್ರೀಕುಮಾರ್

ಸರ್ಕಾರದ ಪ್ರಧಾನ ಕಾರ್ಯದರ್ಶಿ, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ನಮೂನೆ–1

ಭಾಗ್ಯಲಕ್ಷ್ಮಿ ಯೋಜನೆ

ನೊಂದಾವಣೆ ಅರ್ಜಿ

ಮಗುವಿನೊಂದಿಗಿರುವ ಪೋಷಕರ ಭಾವಚಿತ್ರ

1	ಮಗುವಿನ ಹೆಸರು	
2	ಜನನ ಪ್ರಮಾಣ ಪತ್ರದಂತೆ ಜನ್ಮ ದಿನಾಂಕ(ಮಹಾನಗರ/ನಗರ ಸಭೆ/ಪುರ ಸಭೆ/ಗ್ರಾಮ ಲೆಕ್ಕಿಗರಿಂದ ಪಡೆದಿರಬೇಕು)	
3	ತಾಯಿಯ ಹೆಸರು	
4	ತಂದೆ ಹೆಸರು	
5	ವಿಳಾಸ	
6	(ಅ) ತಾಯಿಯ ಉದ್ಯೋಗ (ಆ) ತಂದೆಯ ಉದ್ಯೋಗ	
7	ಕುಟುಂಬದ ವಾರ್ಷಿಕ ಆದಾಯ	
8	(ಅ) ಕುಟುಂಬದಲ್ಲಿರುವ ಮಕ್ಕಳ ಸಂಖ್ಯೆ (ಆ) ಈಗ ಸೌಲಭ್ಯ ಪಡೆಯುತ್ತಿರುವ ಹೆಣ್ಣು ಮಗು ಕುಟುಂಬದಲ್ಲಿ ಎಷ್ಟನೆಯದು	

9	ಪರಿಶಿಷ್ಟ ಜಾತಿ/ವರಿಶಿಷ್ಟ ಪಂಗಡ/ಇತರರು	
10	ಬಡತನ ರೇಖೆಗಿಂತ ಕೆಳಗಿರುವ ಕುಟುಂಬವೆಂದು ಘೋಷಣೆ ನಂಖ್ಯೆ (ಘೋಷಣೆ ಪ್ರತಿ/ಪಡಿತರ ಚೀಟಿಯ ಪ್ರತಿ ಲಗತ್ತಿಸುವುದು)	
11	ಮಗು ರೋಗನಿರೋಧಕ ಚುಚ್ಚುಮದ್ದು ಪಡೆದಿದೆಯೋ? ಪಡೆದಿದ್ದಲ್ಲಿ ಚುಚ್ಚುಮದ್ದು ಕಾರ್ಡಿನ ಪ್ರತಿ ಲಗತ್ತಿಸುವುದು	

ಸ್ಥಳ ಅರ್ಜಿದಾರರ ಸಹಿ

(ಮಗುವಿನ ತಾಯಿ/ತಂದೆ/ಪೋಷಕರು)

ದಿನಾಂಕ

- ಹೆಣ್ಣು ಮಗು 31/3/2006ರ ನಂತರ ಜನಿಸಿರಬೇಕು
- ಅಂಗನವಾಡಿ ಕಾರ್ಯಕರ್ತೆಯು ಮಗು ಹುಟ್ಟಿದ ಒಂದು ತಿಂಗಳೊಳಗೆ ಜನನ ಪ್ರಮಾಣ ಪತ್ರದೊಂದಿಗೆ ನಲ್ಲಿಸಬೇಕು
- ಮಗುವಿನ ಹೆಸರು ನಮೂದಿಸುವುದು ಕಡ್ಡಾಯವಾಗಿರುತ್ತದೆ

ನಮೂನೆ–2

ಮುಚ್ಚಳಿಕೆ ಪ್ರಮಾಣ ಪತ್ರ

ಭಾಗ್ಯಲಕ್ಷ್ಮಿ ಯೋಜನೆಯಡಿ ರೂ 10,000/– ನಿಶ್ಚಿತ ಠೇವಣಿ ಸೌಲಭ್ಯ ಪಡೆಯಲು

ಶ್ರೀ ---------- ತಂದೆ/ಶ್ರೀಮತಿ---------- ---- ಎಂಬ ಹೆಸರಿನ ತಂದೆ/ತಾಯಿಯಾದ ನಾನು/ನಾವು, ನನಗೆ/ನಮಗೆ ದಿನಾಂಕ---------- ರಂದು ಹುಟ್ಟಿದ ---------- --- ಮೊದಲನೇ/ಎರಡನೇ ಹೆಣ್ಣು ಮಗುವಾಗಿದ್ದು, ಭಾಗ್ಯಲಕ್ಷ್ಮೀ ಯೋಜನೆಯಡಿ ರೂ 10,000/–ಗಳ ಠೇವಣಿ ಹೂಡುವ ಸಲುವಾಗಿ ಸರ್ಕಾರ ವಿಧಿಸಿರುವ ಕೆಳಕಂಡ ಷರತ್ತುಗಳನ್ನು ಒಪ್ಪಿರುತ್ತೇನೆ/ವೆ

1 ಹೆಣ್ಣು ಮಗುವನ್ನು ಲಿಂಗಬೇಧ ತಾರತಮ್ಯ ಮಾಡದೆ ನಾಕುತ್ತೇನೆ

2 ಯಾವುದೇ ಕಾರಣಕ್ಕೂ ಹೆಣ್ಣು ಮಗುವನ್ನು ಬಾಲ ಕಾರ್ಮಿಕಳನ್ನಾಗಿ ಮಾಡುವುದಿಲ್ಲ

3 ಕನಿಷ್ಠ 8ನೇ ತರಗತಿಯವರೆಗೆ ವಿದ್ಯಾಭ್ಯಾಸ ಕೊಡಿಸುತ್ತೇನೆ

4 ಹದಿನೆಂಟು ವರ್ಷ ತುಂಬುವವರೆಗೆ ಮದುವೆ ಮಾಡುವುದಿಲ್ಲ

ಮೇಲ್ಕಂಡ ಷರತ್ತುಗಳನ್ನು/ಉಲ್ಲಂಘಿಸಿದಲ್ಲಿ ಮಂಜೂರು ಮಾಡಿರುವ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಬಹುದೆಂದು ಒಪ್ಪಿ ಸಹಿ ಮಾಡಿರುತ್ತೇನೆ

ಸ್ಥಳ ತಂದೆಯ ಸಹಿ
(ಎಡಗೈ ಹೆಬ್ಬೆಟ್ಟಿನ ಗುರುತು)

ದಿನಾಂಕ ತಾಯಿಯ ಸಹಿ
(ಎಡಗೈ ಹೆಬ್ಬೆಟ್ಟಿನ ಗುರುತು)

ನಮೂನೆ–3

ಮೇಲ್ವಿಚಾರಣೆಯ ದೃಢೀಕರಣ

---------- ಶಿಶು ಅಭಿವೃದ್ಧಿ ಯೋಜನಾ ಕಚೇರಿ ವ್ಯಾಪ್ತಿಯಲ್ಲಿ ---
---------- ವೃತ್ತದ ---------- ಗ್ರಾಮದ
ಅಂಗನವಾಡಿ ಕೇಂದ್ರದ ವ್ಯಾಪ್ತಿಯಲ್ಲಿ ವಿಳಾಸ ----------
ರಲ್ಲಿ ವಾಸಿಸುವ ಶ್ರೀಮತಿ ----------ಕೋಂ----------
ಇವರು ದಿನಾಂಕ----------ರಂದು ಒಂದನೇ/ಎರಡನೇ ಹೆಣ್ಣು ಮಗುವಿಗೆ ಜನ್ಮ ನೀಡಿದ್ದು, ಭಾಗ್ಯ ಲಕ್ಷ್ಮಿ ಯೋಜನೆ ಯಡಿ ನಿಶ್ಚಿತ ರೇವಣಿ ರೂ 10,000/– ಕ್ಕೆ ಅರ್ಹರಿರುತ್ತಾರೆ ಮಗುವಿನ ಹೆಸರು----------
ಎಂದು ಇಡಲಾಗಿದೆ ಮಗುವಿನ ಹೆಸರುಳ್ಳ ಜನ್ಮ ಪ್ರಮಾಣ ಪತ್ರ ಪರಿಶೀಲಿಸಿ ಲಗತ್ತಿಸಲಾಗಿದೆ ಮಗುವಿನ ತಂದೆ/ತಾಯಿ ಬಡತನ ರೇಖೆಗಿಂತ ಕೆಳಗಿನ ಕುಟುಂಬಕ್ಕೆ ಸೇರಿದವರೆಂಬ --- ಸಲ್ಲಿಸಿರುವ ದಾಖಲೆ ಪರಿಶೀಲಿಸಿ ದೃಢೀಕರಿಸಿದೆ

ಈ ಕುಟುಂಬದಲ್ಲಿ ಒಟ್ಟು ----------ಜೀವಂತ ಮಕ್ಕಳಿದ್ದು, ತಾಯಿ ಅಥವಾ ತಂದೆ ಶಾಶ್ವತ ಕುಟುಂಬ ಯೋಜನೆ ವಿಧ್ಧತಿ ಅಳವಡಿಸಿಕೊಂಡಿರುತ್ತಾರೆ

ಸ್ಥಳ	ಅಂಗನವಾಡಿ ಕಾರ್ಯಕರ್ತೆಯ ಸಹಿ	ಮೇಲ್ವಿಚಾರಕಿಯ ಸಹಿ ಹೆಸರು
ದಿನಾಂಕ	ಅಂಗನವಾಡಿ ಕೇಂದ್ರ	ವೃತ್ತದ ಹೆಸರು

* ವೃತ್ತದ ಮೇಲ್ವಿಚಾರಕಿಯು ಅಂಗನವಾಡಿ ಕಾರ್ಯಕರ್ತೆಯಿಂದ ಎಲ್ಲಾ ಅವಶ್ಯ ದಾಖಲಾತಿಗಳೊಂದಿಗೆ ಅರ್ಜಿಯನ್ನು ಪಡೆದು ಒಂದು ತಿಂಗಳೊಳಗೆ ಕ್ರೋಢೀಕೃತ ಪಟ್ಟಿಯೊಂದಿಗೆ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಿಗೆ ಸಲ್ಲಿಸತಕ್ಕದ್ದು

* ಅಂಗನವಾಡಿ ವ್ಯಾಪ್ತಿಯಿಂದ ಹೊರಗಿರುವ ಮಹಾನಗರ ಪಾಲಿಕೆ/ನಗರ ನಭಾ ಪ್ರದೇಶಗಳಲ್ಲಿ ಈ ಕಾರ್ಯವನ್ನು ಮಹಾನಗರ ಪಾಲಿಕೆ ಸಿಬ್ಬಂದಿ/ ನಗರ ನಭೆ ಗಳಲ್ಲಿನ ಸಿಬ್ಬಂದಿಗೆ ವಹಿಸುವುದು

ನಮೂನೆ–4

ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಶಿಫಾರಸ್ಸುಸಸ

ಭಾಗ್ಯಲಕ್ಷ್ಮಿ ಯೋಜನೆಯಡಿ ರೂ 10,000/– ನಿಶ್ಚಿತ ಠೇವಣಿ ಸೌಲಭ್ಯ ಪಡೆಯಲು

ಶ್ರೀ ---------- ರವರ ಪತ್ನಿ ಶ್ರೀಮತಿ ----------
ಇವರು ---------- ಗ್ರಾಮದ ----------
ಹೋಬಳಿ ----------ತಾಲ್ಲೂಕದಲ್ಲಿ ವಾಸಿಸುತ್ತಿದ್ದು---------
ವೃತ್ತದ ಮೇಲ್ವಿಚಾರಕಿ ಶ್ರೀಮತಿ ---------- ಇವರು ಸಲ್ಲಿಸಿರುವ ಎಲ್ಲಾ ವಿವರಗಳು ಸಮರ್ಪಕವಾಗಿರುತ್ತದೆ ಆದುದರಿಂದ ರೂ 10,000/– (ಹತ್ತು ಸಾವಿರ ರೂಪಾಯಿಗಳು ಮಾತ್ರ) ಗಳ ನಿಶ್ಚಿತ ಠೇವಣಿ ಹೂಡಲು ಮಂಜೂರಾತಿಗಾಗಿ ಉಪ/ಸಹಾಯಕ ನಿರ್ದೇಶಕರು, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ----------ಜಿಲ್ಲೆ ಇವರಿಗೆ ಶಿಫಾರಸ್ಸು ಮಾಡಲಾಗಿದೆ

ಸ್ಥಳ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಸಹಿ
ಮೊಹರಿನೊಂದಿಗೆ

ದಿನಾಂಕ

* ಶಿಶು ಅಭಿವೃದ್ಧಿ ಯೋಜನಾದಿಕಾರಿಗಳು ಎಲ್ಲಾ ವೃತ್ತಗಳಿಂದ ಪಡೆದ ಮಾಹಿತಿಯನ್ನು ಪರಿಶೀಲಿಸಿ 15 ದಿನಗಳೊಳಗೆ ಸಂಬಂಧಪಟ್ಟ ಉಪ/ಸಹಾಯಕ ನಿರ್ದೇಶಕರು, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರಿಗೆ ಸಲ್ಲಿಸುವುದು

ನಮೂನೆ–4

ಉಪ/ಸಹಾಯಕ ನಿರ್ದೇಶಕರು, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಕಚೇರಿ ಇವರ ನಡವಳಿಗಳು

ಮಂಜೂರಾತಿ ಆದೇಶ

---------- ಜಿಲ್ಲೆ---------- ತಾಲ್ಲೂಕಿನ ----------
----------ಹೋಬಳಿಯ ----------ವಿಳಾಸದಲ್ಲಿ
ವಾಸವಾಗಿರುವ ಶ್ರೀಮತಿ ----------ಗಂಡ----------ಇವರಿಗೆ
----------ದಿನಾಂಕದಂದು ಜನಿಸಿದ ಒಂದು /ಎರಡನೇ ಹೆಣ್ಣು ಮಗುವಿಗೆ ಭಾಗ್ಯಲಕ್ಷ್ಮಿ ಯೋಜನೆಯಡಿ ರೂ 10,000/ (ಹತ್ತು ಸಾವಿರ ರೂಪಾಯಿಗಳು)

ಮಾತ್ರ ಲೆಕ್ಕಕ್ಕೆ ಶೀರ್ಷಿಕೆ 2235–02–102—0–25–100 ಧನ ಸಹಾಯ/ಪರಿಹಾರ (ಯೋಜನೆ) ಅಡಿಯಲ್ಲಿ 18 ವರ್ಷಗಳ ನಿಶ್ಚಿತ ರೇವಣಿ ಇಡಲು ಮಂಜೂರು ಮಾಡಲಾಗಿದೆ ಈ ಮೊಬಲಗನ್ನು ---------- ---------- ಸಂಸ್ಥೆ/ನಿಗಮ ದಲ್ಲಿ ನಿಶ್ಚಿತ ರೇವಣಿ ಹೂಡಲು ಆದೇಶಿಸಲಾಗಿದೆ

ಸ್ಥಳ ಉಪ/ ಸಹಾಯಕ ನಿರ್ದೇಶಕರು,
ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,
ದಿನಾಂಕ ಜಿಲ್ಲಾ ಕಚೇರಿ ಇವರ ಸಹಿ ಮೊಹರಿನೊಂದಿಗೆ

ನಮೂನೆ–6

ಫ್ಲೋ ಚಾರ್ಟ್

ಕ್ರ.ಸಂ	ವಿವರ	ಕಾಲಾವಕಾಶ
1	ಅಂಗನವಾಡಿ ಕಾರ್ಯಕರ್ತೆ/ ಮೇಲ್ವಿಚಾರಕಿ ಹೆಣ್ಣು ಮಗುವನ್ನು ಗುರುತಿಸಿ ತಂದೆ/ತಾಯಿಯಿಂದ ಅರ್ಜಿಯನ್ನು ಜನನ ಪ್ರಮಾಣ ಪತ್ರದೊಂದಿಗೆ ಸ್ವೀಕರಿಸಿ, ದಾಖಲೆಗಳನ್ನು ಪರಿಶೀಲಿಸಿ, ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಿಗೆ ಸಲ್ಲಿಸಲು	1 ತಿಂಗಳು
2	ಶಿಶು ಅಭಿವೃದ್ಧಿ ಯೋಜನಾಧಿಕಾರಿ ದಾಖಲೆಗಳನ್ನು ಪರಿಶೀಲಿಸಿ, ಉಪ/ಸಹಾಯಕ ನಿರ್ದೇಶಕರಿಗೆ ಮಂಜೂರಾತಿಗಾಗಿ ಪ್ರಸ್ತಾವನೆ ಸಲ್ಲಿಸಲು	15 ತಿಂಗಳು
3	ಉಪ /ಸಹಾಯಕ ನಿರ್ದೇಶಕರು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಿಂದ ಸ್ವೀಕರಿಸಿರುವ ಪ್ರಸ್ತಾವನೆಗಳನ್ನು ಪರಿಶೀಲಿಸಿ, ಅನುದಾನ ಬಿಡುಗಡೆಗಾಗಿ ಪ್ರಸ್ತಾವನೆಗಳನ್ನು ಪರಿಶೀಲಿಸಿ, ಅನುದಾನ ಬಿಡುಗಡೆಗಾಗಿ ಪ್ರಧಾನ ಕಚೇರಿಗೆ ಸಲ್ಲಿಸಲು	15 ದಿನ
4	ಉಪ/ಸಹಾಯಕ ನಿರ್ದೇಶಕರುಗಳಿಗೆ ಅನುದಾನ ಬಿಡುಗಡೆ ಮಾಡಿ ಖಜಾನೆ ಗಣಕ ಕಾಲದಲ್ಲಿ ಅಳವಡಿಸಲು	15 ದಿನ
5	ಬಿಡುಗಡೆಯಾಗಿರುವ ಅನುದಾನವನ್ನು ಉಪ/ಸಹಾಯಕ ನಿರ್ದೇಶಕರು ಖಜಾನೆಯಿಂದ ನಗದೀಕರಿಸಿ ಫಲಾನುಭವಿಗಳ ಹೆಸರಿನಲ್ಲಿ ಆರ್ಥಿಕ ಸಂಸ್ಥೆಯಲ್ಲಿ ಇಡಲು	15 ದಿನ